## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಜಾಪುರ ಜಿಲ್ಲೆ, ದೇವರ ಹಿಪ್ಪರಗಿ ವಿಧಾನ ಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗೆ ವಿಶೇಷ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ವಿಜಾಪುರ ರವರ ಪ್ರಸ್ತಾವನೆ ಸಂಖ್ಯೆ: ಜಿಪಂಅ/ಕುನೀ/ಸಿಆರ್-29/2011-12/ ದಿನಾಂಕ:20.07.2011.

---

**ಪೀಠಿಕೆ:**

ವಿಜಾಪುರ ಜಿಲ್ಲೆ, ದೇವರ ಹಿಪ್ಪರಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆಯಿರುವ ಕುರಿತು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ವಿಜಾಪುರ ಇವರು ದೇವರ ಹಿಪ್ಪರಗಿ ವಿಧಾನ ಸಭಾ ಮತಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಪ್ರಸ್ತಾಪಿಸಿ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಜಾಗ್ರತೆಯಾಗಿ ವಿಶೇಷ ಅನುದಾನ ಬಿಡುಗಡೆ ಮಾಡಲು ಸರ್ಕಾರವನ್ನು ವಿನಂತಿಸಿರುತ್ತಾರೆ. ಈಗಾಗಲೇ ಗ್ರಾಅಪಂ.ರಾಜ್ ಇಲಾಖೆಯಿಂದ ಶಾಸಕರ ಕಾರ್ಯಪಡೆಗಳಿಗೆ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡಿರುವುದರಿಂದ ಮತ್ತು ಕಂದಾಯ ಇಲಾಖೆಯೂ ಸಹ CRF/NCCFನಡಿ ಕುಡಿಯುವ ನೀರಿನ ಪರಿಹಾರ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿರುವುದರಿಂದ, ಸದ್ಯಕ್ಕೆ ರೂ.32.70ಲಕ್ಷ ಅನುದಾನವನ್ನು ವಿಜಾಪುರ ಜಿಲ್ಲೆ ದೇವರ ಹಿಪ್ಪರಗಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನ ಸಂಬಂಧ ಬಿಡುಗಡೆ ಮಾಡಲು ನಿರ್ಧರಿಸಿದೆ. ಆದ್ದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/36/ ಗ್ರಾನೀಸ(3) 2011 ಬೆಂಗಳೂರು, ದಿನಾಂಕ: 03-08-2011.**

ಪೀಠಿಕೆಯಲ್ಲಿರುವ ವಾಸ್ತವಾಂಶಗಳ ಹಿನ್ನಲೆಯಲ್ಲಿ ವಿಜಾಪುರ ಜಿಲ್ಲೆ, ದೇವರ ಹಿಪ್ಪರಗಿ ವಿಧಾನ ಸಭಾ ಕ್ಷೇತ್ರದ ಗ್ರಾಮೀಣ ಪ್ರದೇಶಗಳಲ್ಲಿ ತಲೆದೋರಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸ್ಥಳೀಯ ಅಗತ್ಯತೆಯನುಸಾರ ಆದ್ಯತೆ ಮೇಲೆ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ.32.70ಲಕ್ಷ(ಮುವತ್ತೆರಡು ಲಕ್ಷ ಎಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು 2011-12ನೇ ಸಾಲಿಗೆ ರಾಜ್ಯ ವಲಯದ C&Q ಘಟಕದಡಿ ವಿಜಾಪುರ ಜಿಲ್ಲಾ ಪಂಚಾಯತಿಗೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಅನುಷ್ಠಾನಗೊಳಿಸಿರುವ ಕಾಮಗಾರಿಗಳ ವಿವರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳ ಮಾಹಿತಿಗಾಗಿ ಕಳುಹಿಸುವುದು. ಕಾಮಗಾರಿ ಅನುಷ್ಠಾನಗೊಳಿಸುವ ಮುನ್ನ ಪ್ರಶ್ನಿತ ಕಾಮಗಾರಿಗಳು 2011-12ರ ಸಾಲಿನ ಕ್ರಿಯಾಯೋಜನೆಯಡಿ ಸೇರ್ಪಡೆಯಾಗದಿರುವುದನ್ನು ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಕಾಮಗಾರಿಗಳ ಅನುಷ್ಠಾನಕ್ಕೆ ಮುನ್ನ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನ ಪಡೆದುಕೊಳ್ಳತಕ್ಕದ್ದು.

3. ಈ ಅನುದಾನವನ್ನು ರಾಜ್ಯವಲಯದ ಲೆಕ್ಕಶೀರ್ಷಿಕೆ: 4215-01-102-9-01-059ಯಡಿ ಗಣನೆಗೆ ತೆಗೆದುಕೊಂಡು, RTGS ಮುಖೇನ ಈಗಾಗಲೇ Coverage & Qualityಯಡಿ ಗೊತ್ತುಪಡಿಸಿರುವ SWSM ಬ್ಯಾಂಕ್ ಖಾತೆ ಮುಖೇನ ವಿನಿಯೋಗಿಸತಕ್ಕದ್ದು. ಸಿಂಡಿಕೇಟ್ ಬ್ಯಾಂಕ್ ಮೂಲ ಖಾತೆ ಸಂಖ್ಯೆ: 04462010091577ರಿಂದ Coverage & Quality ಕಾರ್ಯಕ್ರಮದ ಖಾತೆ ಸಂಖ್ಯೆ: 04462010094572ಕ್ಕೆ ರೂ.32.70ಲಕ್ಷಗಳನ್ನು ವರ್ಗಾಯಿಸಿ, ಸದರಿ ಅನುದಾನದಿಂದ C&Q ಘಟಕದಡಿ ವಿಜಾಪುರ ಜಿಲ್ಲಾ ಪಂಚಾಯತ್ ಕಳುಹಿಸುವ ಬಿಲ್‌ಗಳನ್ನು ಮಾನ್ಯ ಮಾಡತಕ್ಕದ್ದು. ಸದರಿ ಅನುದಾನ ವಿನಿಯೋಗದ ಆರ್ಥಿಕ ಮತ್ತು ಭೌತಿಕ ಪ್ರಗತಿಗಳನ್ನು CE/PRED ಹಾಗೂ ವಿಜಾಪುರ, ಜಿಲ್ಲಾ ಪಂಚಾಯತ್ IMISನಲ್ಲಿ ದಾಖಲಿಸತಕ್ಕದ್ದು.

4. ಈ ಆದೇಶವನ್ನು ಆರ್ಥಿಕ ಇಲಾಖೆ ಸಹಮತಿ ಸಂಖ್ಯೆ: FD 149 Exp.6/2011, ದಿ:08.03.2011 ಹಾಗೂ ಗ್ರಾಅಪಂ.ರಾಜ್ ಇಲಾಖೆಯ IFAರವರು ಯೋಜನೆಗಳ ಮುಂದುವರಿಕೆಗೆ ಹೊರಡಿಸಿರುವ ಆದೇಶ ಸಂಖ್ಯೆ: ಗ್ರಾಅಪ/03/ಆಂ.ಆ.ಸ/2011, ದಿ:01.04.2011ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು(ಎಯು-1)ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ ಬೆಂ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಇವರ ಆಪ್ತ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಬೆಂಗಳೂರು.
9. ವಿಶೇಷಾಧಿಕಾರಿಗಳು(ಜಿಪಂ)ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು,ಆರ್ಥಿಕ ಇಲಾಖೆ, ವಿಧಾನಸೌಧ.
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜನಿಯರ್, ಪಂಚಾಯತ್‌ರಾಜ್ ಇಂಜನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಸಂಕೀರ್ಣ,ನಂ55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂ-20.
12. ಜಿಲ್ಲಾಧಿಕಾರಿಗಳು, ವಿಜಾಪುರ.
13. ಜಿಲ್ಲಾ ಪಂಚಾಯತ್ ಅಧ್ಯಕ್ಷರು, ವಿಜಾಪುರ.
14. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು, ವಿಜಾಪುರ.
15. ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಬಸವನ ಬಾಗೇವಾಡಿ, ಮುದ್ದೆಬಿಹಾಳ ಮತ್ತು ಸಿಂದಗಿ.
16. ಪಂಚಾಯತ್ ರಾಜ್ ಇಂಜನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು, ಧಾರವಾಡ.
17. ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗದ ಕಾರ್ಯಪಾಲಕ ಇಂಜನಿಯರ್, ವಿಜಾಪುರ.
18. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜನಿಯರ್‌ರವರ ಕಛೇರಿ, PRED, ಬೆಂಗಳೂರು-20.
19. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
20. ನಿರ್ದೇಶಕರು KRWSSA ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿಗಳು/ಅಪರ ನಿರ್ದೇಶಕರು ಆರ್ಥಿಕ(ಗ್ರಾಮಸ್ವರಾಜ್) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್‌ಇಲಾಖೆ, ಇವರುಗಳ ಆಪ್ತ ಸಹಾಯಕರು.
21. ಮ್ಯಾನೇಜರ್ ಸಿಂಡಿಕೇಟ್ ಬ್ಯಾಂಕ್, BWSSB Branch, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂರಸ್ತೆ, ಬೆಂಗಳೂರು.
22. ನಿರ್ದೇಶಕರು ಶ್ರೀ ಅಬ್ದುಲ್ ನಜೀರ್‌ಸಾಬ್ ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ ಲಲಿತ್ ಮಹಲ್ ರಸ್ತೆ ಮೈಸೂರು.
23. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
24. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂರಾ ಇಲಾಖೆ(ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5ಪ್ರತಿಗಳು)
25. ರಾಜ್ಯ ಪತ್ರಾಗಾರ ಇಲಾಖೆ(ಬಿಡಿ ಪ್ರತಿ ಶಾಖೆ)
26. ಗ್ರಾ.ಅ.ಪಂ.ರಾಜ್ ಇಲಾಖೆ ಮಾಹಿತಿ ಕೇಂದ್ರ-10ಪ್ರತಿಗಳು.
27. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.